# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **17** |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 09-12-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| ಪ್ರಶ್ನೆ | | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಾಸಿಸುತ್ತಿರುವ ಎಲ್ಲಾ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆಯೇ; ಇಲ್ಲದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮವೇನು; ಯಾವ ಕಾರಣಕ್ಕಾಗಿ ವಿದ್ಯುತ್ ಸಂಪರ್ಕ ಒದಗಿಸಲು ಸಾಧ್ಯವಾಗಿಲ್ಲ; | ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ನಿಯಮಾನುಸಾರ ಅರ್ಜಿ ಸಲ್ಲಿಸಿರುವ ಎಲ್ಲಾ ಗ್ರಾಹಕರಿಗೂ ವಿದ್ಯುತ್ ಸಂಪರ್ಕ ಒದಗಿಸಲಾಗಿರುತ್ತದೆ ಹಾಗೂ ಸರ್ಕಾರದ ಯೋಜನೆಗಳ ಮೂಲಕ ಗುರುತಿಸಲಾಗಿರುವ ಫಲಾನುಭವಿಗಳಿಗೂ ವಿದ್ಯುತ್ ಸಂಪರ್ಕ ಒದಗಿಸಲಾಗಿರುತ್ತದೆ. |
| ಆ) | ಗೃಹಜ್ಯೋತಿ ಯೋಜನೆ ಅನ್ವಯ ರಾಜ್ಯದಲ್ಲಿ ಎಷ್ಟು ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ ನೀಡಲಾಗಿದೆ; ಇದಕ್ಕೆ ತಗಲುವ ವೆಚ್ಚ ಎಷ್ಟು; ಈ ವೆಚ್ಚವನ್ನು ಸರ್ಕಾರದಿಂದ ಸಂಬಂಧಪಟ್ಟ ವಿದ್ಯುತ್ ಕಂಪನಿಗಳಿಗೆ ನೀಡಲಾಗಿದೆಯೇ; (ವಿವರ ನೀಡುವುದು) | ರಾಜ್ಯದಲ್ಲಿ 'ಗೃಹ ಜ್ಯೋತಿ' ಯೋಜನೆಯಡಿ ಉಚಿತ ವಿದ್ಯುತ್ ಸೌಲಭ್ಯ ಪಡೆದ ಫಲಾನುಭವಿಗಳು, ಉಚಿತ ವಿದ್ಯುತ್ ನೀಡಲು ತಗುಲಿದ ವೆಚ್ಚ ಮತ್ತು ಸರ್ಕಾರದಿಂದ ಬಿಡುಗಡೆಯಾದ ಸಹಾಯಧನದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಇ) | ಉಚಿತ ವಿದ್ಯುತ್ ಒದಗಿಸಲಾಗುತ್ತಿರುವ ಕುಟುಂಬಗಳಿಗೆ ತಗಲುವ ವೆಚ್ಚ ಎಷ್ಟು ಮತ್ತು ನೀಡಲು ಬಾಕಿ ಇರುವ ಕುಟುಂಬಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ 'ಗೃಹ ಜ್ಯೋತಿ' ಯೋಜನೆಯಡಿ ಉಚಿತ ವಿದ್ಯುತ್ ಸೌಲಭ್ಯ ಪಡೆದ ಫಲಾನುಭವಿಗಳಿಗೆ ವಿದ್ಯುತ್ ಒದಗಿಸಲು ತಗುಲಿದ ವೆಚ್ಚದ ಜಿಲ್ಲಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ.<br>ಗೃಹಜ್ಯೋತಿ ಯೋಜನೆಯಡಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ದಾಖಲಿಸಿಕೊಂಡಿರುವ ಸ್ಥಾವರಗಳ ಪೈಕಿ ಅರ್ಹ ಸ್ಥಾವರಗಳಿಗರ ಗೃಹಜ್ಯೋತಿಯ ಸಹಾಯಧನ ಬಿಡುಗಡೆಗೊಳಿಸಲಾಗಿದೆ. ಸಹಾಯಧನ ಬಿಡುಗಡೆಗೆ ಬಾಕಿ ಇರುವ ಸ್ಥಾವರಗಳಿರುವುದಿಲ್ಲ. |

ಈ) ರಾಜ್ಯದಲ್ಲಿ ವಿದ್ಯುತ್‌ನ್ನು ಯಾವ ಯಾವ ಮೂಲಗಳಿಂದ ಉತ್ಪಾದಿಸಲಾಗುತ್ತಿದೆ; ಹೆಚ್ಚುವರಿ ವಿದ್ಯುತ್ ಉತ್ಪಾದನೆಗೆ ಇಲಾಖೆ ಮುಂದೆ ಪ್ರಸ್ತಾವನೆಗಳಿವೆಯೇ; (ವಿವರ ನೀಡುವುದು)

ರಾಜ್ಯದಲ್ಲಿ ಪ್ರಸ್ತುತ 2024-25ನೇ ಸಾಲಿನ (ಏಪ್ರಿಲ್-2024 ರಿಂದ ಸೆಪ್ಟೆಂಬರ್-24ರ ಅಂತ್ಯದವರೆಗೆ) ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ:

| ಕ್ರ.ಸಂ | ವಿದ್ಯುತ್ತಿನ ಮೂಲಗಳು | 2024-25ನೇ ಸಾಲಿನ ( ಏಪ್ರಿಲ್ - 24 ರಿಂದ ಸೆಪ್ಟೆಂಬರ್ -24 ರ ಅಂತ್ಯದವರೆಗೆ) ಲಭ್ಯವಾದ ವಿದ್ಯುತ್ತಿನ ಪ್ರಮಾಣ ಮಿ.ಯೂ.ಗಳಲ್ಲಿ (ತಾತ್ಕಾಲಿಕ) |
|---|---|---|
| 1) | ಜಲ ವಿದ್ಯುತ್ | 6066.31 |
| 2) | ಶಾಖೋತ್ಪನ್ನ (ಉಷ್ಣ ವಿದ್ಯುತ್) | 10129.98 |
| 3) | ಪವನ ವಿದ್ಯುತ್ | 6649.66 |
| 4) | ಸೌರ ವಿದ್ಯುತ್ | 5156.60 |
| 5) | ಕೇಂದ್ರ ಸರ್ಕಾರ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಘಟಕಗಳಿಂದ ರಾಜ್ಯದ ಪಾಲು | 12539.08 |
| 6) | **ಇತರೆ ಮೂಲಗಳಿಂದ:** | |
| | ಕ್ಯಾಪ್ಟಿವ್ | 351.51 |
| | ಹೈಡಲ್ | 8.75 |
| | ಮಿನಿ ಹೈಡಲ್ | 1249.31 |
| | ಕೋ- ಜನರೇಷನ್ | 422.62 |
| | ಬಯೋಮಾಸ್ | 5.41 |
| | ಹೈಬ್ರಿಡ್ (Wind + solar) | 1008.63 |
| 7) | ಬೃಹತ್ ಐ.ಪಿ.ಪಿ. | 2340.09 |
| 8) | ಜಿಂದಾಲ್ | 548.69 |
| | **ಒಟ್ಟು** | **46476.64** |

ರಾಜ್ಯದಲ್ಲಿ ಹೆಚ್ಚುವರಿ ವಿದ್ಯುತ್‌ನ್ನು ಪಡೆಯಲು ಪಿ.ಸಿ.ಕೆ.ಎಲ್. ಸಂಸ್ಥೆಗೆ ಸರ್ಕಾರ ಅನುಮೋದಿಸಿರುವ ಪ್ರಸ್ತಾವನೆಗಳು ಈ ಕೆಳಗಿನಂತಿವೆ:

1. ಕರ್ನಾಟಕ ಸರ್ಕಾರ ಅನುಮೋದಿಸಿದಂತೆ, ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯು 1000 ಮೆಗಾ ವ್ಯಾಟ್ ಪಂಪ್ಡ್ ಹೈಡ್ರೋ ಸ್ಟೋರೇಜ್ ಪ್ರಾಜೆಕ್ಟ್ (PHSP) ಮುಖಾಂತರ ವಿದ್ಯುತ್‌ನ್ನು, ಖಾಸಗಿ ಹೂಡಿಕೆ ಆಧಾರದ ಮೇಲೆ ಪಡೆಯಲು ಟೆಂಡರ್‌ನ್ನು ಕರೆಯಲಾಗಿದ್ದು, ಆಡಳಿತಾತ್ಮಕ ಪ್ರಕ್ರಿಯೆ ಪ್ರಗತಿಯಲ್ಲಿದೆ.
2. Firm Power ಸರಬರಾಜಿಗಾಗಿ ಶಕ್ತಿ ನೀತಿಯಡಿ ಕಲ್ಲಿದ್ದಲು ಆಧಾರಿತ ಯೋಜನೆಗಳಿಂದ 2000MW ದೀರ್ಘಾವಧಿ ವಿದ್ಯುತ್ ನ್ನು ಟೆಂಡರ್ ಮುಖಾಂತರ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

| | | |
|---|---|---|
| | | 3. ಕವಿನಿನಿ ಸಂಸ್ಥೆಯು 370 ಮೆ.ವ್ಯಾ ಅನಿಲ ಆಧಾರಿತ ವಿದ್ಯುತ್ ಯೋಜನೆಯನ್ನು ಯಲಹಂಕದಲ್ಲಿ ಪ್ರಾರಂಭಿಸಿದೆ.<br>4. ಕವಿನಿನಿ.ಯವರು ಬೆಂಗಳೂರಿನ ಸಮೀಪದ ಬಿಡದಿಯಲ್ಲಿ 11.5 ಮೆ.ವ್ಯಾ ಸಾಮರ್ಥ್ಯದ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಘಟಕವನ್ನು ಪ್ರಾರಂಭಿಸಲಾಗಿದೆ.<br>5. ಕವಿನಿನಿ ಯವರು 170 ಮೆ.ವ್ಯಾ ಸೌರ ವಿದ್ಯುತ್ ಘಟಕಗಳನ್ನು RTPS, BTPS, YTPS ಆವರಣದಲ್ಲಿ ಯೋಜಿಸಲಾಗಿದೆ.<br>6. ಕವಿನಿನಿಯವರು 100 ಮೆ.ವ್ಯಾ ತೇಲುವ ಸೌರ ಘಟಕವನ್ನು ಕದ್ರಾ ಅಣೆಕಟ್ಟಿನ ಹಿನ್ನೀರಿನ ಪ್ರದೇಶದಲ್ಲಿ ಯೋಜಿಸಲಾಗಿದೆ.<br>7. ಕವಿನಿನಿಯವರು 2000 ಮೆ.ವ್ಯಾ ಶರಾವತಿ PSP ಘಟಕದ ನಿರ್ಮಾಣಕ್ಕಾಗಿ ಕಾರ್ಯಾದೇಶ ನೀಡಲಾಗಿದೆ. |
| ಉ) | ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿಸಲಾಗುತ್ತಿದೆಯೇ; ಯೂನಿಟ್ ಒಂದಕ್ಕೆ ತಗಲುವ ವೆಚ್ಚ ಎಷ್ಟು; ಮಾರಾಟ ಮಾಡುವ ವೆಚ್ಚ ಎಷ್ಟು; ಇಲಾಖೆಗೆ ಇರುವ ಬೇಡಿಕೆ ಎಷ್ಟು? (ವಿವರ ನೀಡುವುದು) | ಪ್ರಸ್ತುತ ವರ್ಷದಲ್ಲಿ ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿಸಲಾಗುತ್ತಿಲ್ಲ. ವಿದ್ಯುತ್ ವಿನಿಮಯ ಕೇಂದ್ರಗಳಿಂದ ವಿದ್ಯುತ್ ಖರೀದಿ/ಮಾರಾಟ ಮಾಡಲಾಗುತ್ತಿದೆ. ಪ್ರಸ್ತುತ 2023-24 ಮತ್ತು 2024-25ನೇ ಸಾಲಿನ ಅಕ್ಟೋಬರ್ ಅಂತ್ಯಕ್ಕೆ ವಿದ್ಯುತ್ ಖರೀದಿ ಮತ್ತು ಮಾರಾಟ ಮಾಡಿದ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ.<br>ಮುಂದುವರೆದು, ರಾಜ್ಯದಲ್ಲಿ 2024-25 ರಲ್ಲಿ ಅಂದಾಜಿಸಲಾದ ವಿದ್ಯುತ್ ಬೇಡಿಕೆಯ ಪ್ರಮಾಣ 92082 ಮಿ.ಯೂ ಇದ್ದು, ಸದರಿ ಬೇಡಿಕೆಯ ದಿನವಹಿ ಸರಾಸರಿ ಪರಿಮಾಣವು ಏಪ್ರಿಲ್-24 ರಿಂದ ಸೆಪ್ಟೆಂಬರ್-24ರ ಅಂತ್ಯದವರೆಗೆ 239.2 ಮಿ.ಯೂ ಗಳಾಗಿರುತ್ತದೆ. |

ಸಂಖ್ಯೆ: ಎನರ್ಜಿ 335 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಐವನ್ ಡಿಸೋಜ ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:17ಕ್ಕೆ ಅನುಬಂಧ-1**

**ರಾಜ್ಯದಲ್ಲಿ 'ಗೃಹ ಜ್ಯೋತಿ' ಯೋಜನೆಯಡಿ ಉಚಿತ ವಿದ್ಯುತ್ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ, ಉಚಿತ ವಿದ್ಯುತ್ ನೀಡಲು ತಗುಲಿದ ವೆಚ್ಚ ಮತ್ತು ಸರ್ಕಾರದಿಂದ ಬಿಡುಗಡೆಯಾದ ಸಹಾಯಧನದ ವಿವರ**

**ರೂ. ಕೋಟಿಗಳಲ್ಲಿ**

| ಕ್ರ.ಸಂ | ಕಂಪನಿ | 'ಗೃಹ ಜ್ಯೋತಿ' ಯೋಜನೆಯಡಿ ಉಚಿತ ವಿದ್ಯುತ್ ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ (ಅಕ್ಟೋಬರ್-2024 ಅಂತ್ಯಕ್ಕೆ) | ಉಚಿತ ವಿದ್ಯುತ್ ನೀಡಲು ತಗುಲಿದ ವೆಚ್ಚ (ಅಕ್ಟೋಬರ್-2024 ಅಂತ್ಯಕ್ಕೆ) | ಸರ್ಕಾರದಿಂದ ಬಿಡುಗಡೆಯಾದ ಸಹಾಯಧನ (ಅಕ್ಟೋಬರ್-2024 ಅಂತ್ಯಕ್ಕೆ) |
|---|---|---|---|---|
| 1. | ಬೆಸ್ಕಾಂ | 67,53,244 | 5128.15 | 5088.84 |
| 2. | ಸೆಸ್ಕ್ | 22,82,641 | 1252.11 | 1269.30 |
| 3. | ಮೆಸ್ಕಾಂ | 16,04,765 | 1240.71 | 1231.93 |
| 4 | ಹೆಸ್ಕಾಂ | 33,54,292 | 1957.96 | 2009.70 |
| 5 | ಜೆಸ್ಕಾಂ | 21,07,214 | 1377.86 | 1355.03 |
| | **ಒಟ್ಟು** | **16102156** | **10956.79** | **10954.80** |

## ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಐವನ್ ಡಿಸೋಜ ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:17ಕ್ಕೆ ಅನುಬಂಧ-2

**ರಾಜ್ಯದಲ್ಲಿ 'ಗೃಹ ಜ್ಯೋತಿ' ಯೋಜನೆಯಡಿ ಫಲಾನುಭವಿಗಳಿಗೆ ಒದಗಿಸಲಾದ ಉಚಿತ ವಿದ್ಯುತ್‌ಗೆ ತಗುಲಿದ ವೆಚ್ಚದ ಜಿಲ್ಲಾವಾರು ವಿವರ**

ರೂ. ಕೋಟಿಗಳಲ್ಲಿ

| ಕ್ರ.ಸಂ | ಕಂಪನಿ | ಜಿಲ್ಲೆ | 'ಗೃಹ ಜ್ಯೋತಿ' ಯೋಜನೆಯಡಿ ಉಚಿತ ವಿದ್ಯುತ್ ಪಡೆದ ಫಲಾನುಭವಿಗಳು (ಅಕ್ಟೋಬರ್-2024 | 'ಗೃಹ ಜ್ಯೋತಿ' ಯೋಜನೆಯಡಿ ಉಚಿತ ವಿದ್ಯುತ್ ನೀಡಲು ತಗುಲಿದ ವೆಚ್ಚ (ಅಕ್ಟೋಬರ್-2024 |
|---|---|---|---|---|
| 1 | ಬೆಸ್ಕಾಂ | ಬೆಂಗಳೂರು ಗ್ರಾಮಾಂತರ | 3,94,157 | 387.86 |
| 2 | | ಬೆಂಗಳೂರು ನಗರ | 37,64,686 | 3309.74 |
| 3 | | ಚಿಕ್ಕಬಳ್ಳಾಪುರ | 3,15,817 | 174.11 |
| 4 | | ಚಿತ್ರದುರ್ಗ | 3,75,906 | 212.7 |
| 5 | | ದಾವಣಗೆರೆ | 5,06,527 | 304.71 |
| 6 | | ಕೋಲಾರ | 3,59,199 | 205.86 |
| 7 | | ರಾಮನಗರ | 3,21,487 | 176.77 |
| 8 | | ತುಮಕೂರು | 7,15,465 | 356.41 |
| | **ಬೆಸ್ಕಾಂ** | **ಒಟ್ಟು** | **67,53,244** | **5128.15** |
| 1 | ಸೆಸ್ಕ್ | ಮೈಸೂರು | 8,87,686 | 550.69 |
| 2 | | ಚಾಮರಾಜನಗರ | 2,60,771 | 116.34 |
| 3 | | ಕೊಡಗು | 1,51,779 | 93.37 |
| 4 | | ಮಂಡ್ಯ | 4,70,306 | 246.28 |
| 5 | | ಹಾಸನ | 5,12,099 | 245.43 |
| | ಸೆಸ್ಕ್ | **ಒಟ್ಟು** | **22,82,641** | **1252.11** |
| 1 | ಮೆಸ್ಕಾಂ | ದಕ್ಷಿಣ ಕನ್ನಡ | 5,17,013 | 509.24 |
| 2 | | ಉಡುಪಿ | 3,38,290 | 299.48 |
| 3 | | ಶಿವಮೊಗ್ಗ | 4,49,563 | 273.91 |
| 4 | | ಚಿಕ್ಕಮಗಳೂರು | 2,99,899 | 158.08 |
| | ಮೆಸ್ಕಾಂ | **ಒಟ್ಟು** | **16,04,765** | **1240.71** |
| 1 | ಹೆಸ್ಕಾಂ | ಬಾಗಲಕೋಟೆ | 4,12,794 | 220.12 |
| 2 | | ಬೆಳಗಾವಿ | 9,85,640 | 568.16 |
| 3 | | ಧಾರವಾಡ | 4,88,896 | 327.05 |
| 4 | | ಗದಗ | 2,67,747 | 136.67 |
| 5 | | ಹಾವೇರಿ | 3,86,339 | 195.27 |
| 6 | | ಉತ್ತರ ಕನ್ನಡ | 3,80,816 | 260.13 |
| 7 | | ವಿಜಯಪುರ | 4,32,060 | 250.55 |
| | ಹೆಸ್ಕಾಂ | **ಒಟ್ಟು** | **33,54,292** | **1957.96** |
| 1 | ಜೆಸ್ಕಾಂ | ಬೀದರ್ | 3,39,478 | 219.97 |
| 2 | | ಕಲಬುರಗಿ | 521028 | 342.65 |
| 3 | | ಯಾದಗಿರಿ | 1,87,829 | 111.39 |
| 4 | | ರಾಯಚೂರು | 2,94,810 | 197.29 |
| 5 | | ಕೊಪ್ಪಳ | 2,69,728 | 162.89 |
| 6 | | ಬಳ್ಳಾರಿ | 2,74,444 | 186.72 |
| 7 | | ವಿಜಯನಗರ | 2,19,897 | 156.94 |
| | ಜೆಸ್ಕಾಂ | **ಒಟ್ಟು** | **21,07,214** | **1377.86** |

## ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಐವನ್ ಡಿಸೋಜ ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:17ಕ್ಕೆ ಅನುಬಂಧ-3

### 2023-24 ಮತ್ತು 2024-25 ರ ಸಾಲಿನಲ್ಲಿ (ಅಕ್ಟೋಬರ್ -25ರ ಅಂತ್ಯಕ್ಕೆ ) ವಿದ್ಯುತ್ ಖರೀದಿ ಮತ್ತು ಮಾರಾಟ ಮಾಡಿದ ವಿವರಗಳು

| ವಿದ್ಯುತ್ ಖರೀದಿ : 2023-24 | | | |
|---|---|---|---|
| **ವರ್ಷ** | **ಖರೀದಿಸಿದ ವಿದ್ಯುತ್ (ಎಂ. ಯೂ. ಗಳಲ್ಲಿ)** | **ಖರೀದಿ ಮೊತ್ತ (ರೂ. ಕೋಟಿಗಳಲ್ಲಿ)** | **ಖರೀದಿ ದರ (ರೂ./ಯೂನಿಟ್)** |
| **2023-24** ವಿವಿಧ ವಿದ್ಯುತ್ ವಿನಿಮಯ ಕೇಂದ್ರಗಳಿಂದ ಖರೀದಿಸಿರುವ ವಿವರ | 3311.28 | 2526.64 | 7.63 |
| **ವಿದ್ಯುತ್ ಮಾರಾಟ : 2023-24** | | | |
| **2023-24** ವಿವಿಧ ವಿದ್ಯುತ್ ವಿನಿಮಯ ಕೇಂದ್ರಗಳಿಂದ ಮಾರಾಟ ಮಾಡಿರುವ ವಿವರ | 674.01 | 274.61 | 4.07 |
| **ವಿದ್ಯುತ್ ಖರೀದಿ : 2024-25 (ಅಕ್ಟೋಬರ್ -24ರ ಅಂತ್ಯಕ್ಕೆ )** | | | |
| **ವರ್ಷ** | **ವಿದ್ಯುತ್ ಖರೀದಿ (ಎಂ.ಯೂ. ಗಳಲ್ಲಿ)** | **ಸಂದಾಯವಾದ ಮೊತ್ತ (ರೂ. ಕೋಟಿಗಳಲ್ಲಿ)** | **ಮಾರಾಟ ದರ (ರೂ./ಯೂನಿಟ್)** |
| **2024-25 (ಅಕ್ಟೋಬರ್-2024 ರ ಅಂತ್ಯಕ್ಕೆ)** ವಿವಿಧ ವಿದ್ಯುತ್ ವಿನಿಮಯ ಕೇಂದ್ರಗಳಿಂದ ಖರೀದಿಸಿರುವ ವಿವರ | 1690.97 | 1292.36 | 7.64 |
| **ವಿದ್ಯುತ್ ಮಾರಾಟ : 2024-25 (ಅಕ್ಟೋಬರ್ -24ರ ಅಂತ್ಯಕ್ಕೆ )** | | | |
| **2024-25 (ಅಕ್ಟೋಬರ್-2024ರ ಅಂತ್ಯಕ್ಕೆ)** ವಿವಿಧ ವಿದ್ಯುತ್ ವಿನಿಮಯ ಕೇಂದ್ರಗಳಿಂದ ಮಾರಾಟ ಮಾಡಿರುವ ವಿವರ | 3682.99 | 1888.30 | 5.13 |